**ದಿನಾಂಕ: 28-09-2011 ರಂದು ವಿಶೇಷ ತಹಶೀಲ್ದಾರ, ಕಿತ್ತೂರು ಇವರ ಕಚೇರಿ ಸಭಾಂಗಣದಲ್ಲಿ ಶ್ರೀ. ಕೆ.ಹೇಮಾಜಿ ನಾಯಕ್, ಕೆ.ಎ.ಎಸ್ ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾ, ಪುವ ಮತ್ತು ಪುನಿ, ಬೃಹತ್ ನೀರಾವರಿ ಯೋಜನೆಗಳು, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕಿತ್ತೂರು ಉತ್ಸವದ-ವೀರರಾಣಿ ಕಿತ್ತೂರು ಚನ್ನಮ್ಮಾಜಿ ಜ್ಯೋತಿ ನಿರ್ವಹಣಾ ಉಪ ಸಮಿತಿ ಸಭೆ ನಡುವಳಿಕೆಗಳು.**

---

ಸಭೆಗೆ ಹಾಜರಿದ್ದ ಸದಸ್ಯರು:

1. ಶ್ರೀ. ಕೆ.ಹೇಮಾಜಿ ನಾಯಕ್, ಕೆ.ಎ.ಎಸ್ ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾ, ಪುವ ಮತ್ತು ಪುನಿ, ಬೃಹತ್ ನೀರಾವರಿ ಯೋಜನೆಗಳು, ಬೆಳಗಾವಿ.
2. ಶ್ರೀ.ಎಂ.ವೈ. ಸಾಲಗಾರ, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೈಲಹೊಂಗಲ
3. ಶ್ರೀ.ಪಿ.ಎನ್. ಲೋಕೇಶ್, ತಹಶೀಲ್ದಾರ, ಬೈಲಹೊಂಗಲ್.
4. ಶ್ರೀ. ಐ.ಆರ್. ಜಂಗಿನಮಠ, ಕ್ಷೇತ್ರ ಶಿಕ್ಷಣ ಅಧಿಕಾರಿ, ಬೈಲಹೊಂಗಲ್,
5. ಶ್ರೀ. ಜಿ.ಎಫ್. ಬಂಡಿಗಿ, ಕ್ಷೇತ್ರ ಶಿಕ್ಷಣ ಅಧಿಕಾರಿ ಕಛೇರಿ, ಕಿತ್ತೂರ,
6. ಶ್ರೀ. ಬಿ.ಬಿ.ವಣ್ಣೂರ, ಕ್ಷೇತ್ರ ಶಿಕ್ಷಣ ಅಧಿಕಾರಿ, ಕಿತ್ತೂರ.
7. ಶ್ರೀಮತಿ.ಎಸ್.ಎಸ್.ಬಳ್ಳಾರಿ, ವಿಶೇಷ ತಹಸೀಲ್ದಾರ, ಕಿತ್ತೂರು.
8. ಶ್ರೀ. ಸಿ.ಆರ್.ಮಾರಿಹಾಳ, ಅಧ್ಯಕ್ಷರು, ರಾಣಿ ಚನ್ನಮ್ಮಾ ವಿಜಯೋತ್ಸವ ಸಮಿತಿ.
9. ಶ್ರೀ.ಮಹಾದೇವಪ್ಪಾ. ಮ.ರಾವಳ ಕಾರ್ಯದರ್ಶಿ, ರಾಣಿ ಚನ್ನಮ್ಮಾ ವಿಜಯೋತ್ಸವ ಸಮಿತಿ.
10. ಶ್ರೀ.ಪ್ರದೀಪ ಮೇಲಿನಮನಿ, ಪ್ರಜಾವಾಣಿ ದಿನಪತ್ರಿಕೆ
11. ಶ್ರೀ.ಚಂದ್ರಗೌಡ ಪಾಟೀಲ. ಕನ್ನಡಪ್ರಭಾ ದಿನಪತ್ರಿಕೆ
12. ಶ್ರೀಎಸ.ಎಂ.ಮರಡಿಮಠ
13. ಶ್ರೀ. ಬಿ.ಡಿ.ಹುಕ್ಕೇರಿಮಠ, ಶಿರಸ್ತೇದಾರ, ಉಪ ವಿಭಾಗಾಧಿಕಾರಿ ಕಚೇರಿ ಬೈಲಹೊಂಗಲ.
14. ಶ್ರೀ. ಎಸ್.ಜಿ. ಖುದ್ದನ್ನವರ, ಐ.ಇ.ಆರ.ಟಿ, ಕಿತ್ತೂರು

---

ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರನ್ನು ಮೊದಲಿಗೆ ಶ್ರೀಮತಿ ಎಸ್.ಎಸ್.ಬಳ್ಳಾರಿ ವಿಶೇಷ ತಹಸೀಲ್ದಾರ, ಕಿತ್ತೂರು ಇವರು ಸ್ವಾಗತಿಸಿದರು. ದಿನಾಂಕ : 06.09.2011 ರಂದು 2011ರ ಕಿತ್ತೂರು ಉತ್ಸವದ ಪೂರ್ವ ಸಿದ್ಧತೆ ಕುರಿತು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಕಿತ್ತೂರು ಗ್ರಾಮ ಪಂಚಾಯತ ಕಚೇರಿಯಲ್ಲಿ ನಡೆದ ಸಭೆಯ ಅನುಸಾರವಾಗಿ ವಿಜಯ ಜ್ಯೋತಿ ಮೆರವಣಿಗೆ ಉಪಸಮಿತಿ ರಚಿಸಲಾಗಿದ್ದು ಈ ಬಾರಿಯ ಕಿತ್ತೂರು ಉತ್ಸವದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮಾ ವೀರಜ್ಯೋತಿಯನ್ನು ಬೈಲಹೊಂಗಲದಿಂದ ರಾಜ್ಯದ ರಾಜಧಾನಿವರೆಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ರೂಪಿಸಿ ವಿಶೇಷ ವಾಹನದಲ್ಲಿ ತೆಗೆದುಕೊಂಡು ಹೋಗುವುದು ಹಾಗೂ ನಂತರ ಬೈಲಹೊಂಗಲಕ್ಕೆ ವಾಪಸ್ ತಂದು ಕಿತ್ತೂರು ಉತ್ಸವದ ಆರಂಭದ ಕಾರ್ಯಕ್ರಮದ ದಿನಾಂಕ ಕಿತ್ತೂರಿಗೆ ತರುವ ವ್ಯವಸ್ಥೆ ಮಾಡುವ ಬಗ್ಗೆ ಕಾರ್ಯಕ್ರಮ ರೂಪಿಸಲು ಹಾಗೂ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚಿಸಲು ಸಮಿತಿಗೆ ವಿನಂತಿಸಿದರು ಹಾಗೂ ಈ ಬಗ್ಗೆ ಸಭೆಯ ಕಲಾಪವನ್ನು ನಡೆಸಿಕೊಡಲು ವಿಶೇಷ ಜಿಲ್ಲಾಧಿಕಾರಿ, ಭೂಸ್ವಾಧೀನ, ಬೆಳಗಾವಿ ಇವರಿಗೆ ವಿನಂತಿಸಿದರು.

ಸಭೆಯ ಆರಂಭದಲ್ಲಿ ಹಾಜರಾದ ಎಲ್ಲರ ಪರಿಚಯ ಮಡಿಕೊಳ್ಳಲಾಯಿತು. ನಂತರ ಶ್ರೀ.ಪಿ.ಎನ್.ಲೋಕೇಶ ಇವರು ಕಳೆದ ಸಾಲಿನಲ್ಲಿನ ಸಮಿತಿಯ ನಡುವಳಿಗಳನ್ನು ಸಭೆಗೆ ವಿವರಿಸಿದರು ಹಾಗೂ ಕಳೆದ ಸಾಲಿನಲ್ಲಿ ನಡೆಸಿದ ಕಾರ್ಯಕ್ರಮಗಳ ಬಗ್ಗೆ ಅವಲೋಕನ ಹಾಗೂ ಹಿಂದಿನ ವ್ಯವಸ್ಥೆಯ ಸಾಧಕ-ಬಾಧಕಗಳನ್ನು ಸಮಿತಿಯ ಸಭೆಯಲ್ಲಿ ಚರ್ಚಿಸಲಾಯಿತು. ಕಳೆದ ಸಾಲಿನಲ್ಲಿ ರೂಪಿಸಿದ ಮಾರ್ಗದ ಕಾರ್ಯಕ್ರಮದ ಸಭೆಗೆ ಶ್ರೀ.ಎಸ್.ಜಿ.ಖುದ್ದನ್ನವರ, ಐ.ಇ.ಆರ್.ಟಿ, ಕಿತ್ತೂರು ಹಾಗೂ ವಾಹನದ ಸಿದ್ಧಪಡಿಸಿದ ವ್ಯವಸ್ಥೆ ಬಗ್ಗೆ ರಾಣಿ ಚನ್ನಮ್ಮ ವಿಜಯೋತ್ಸವ ಸಮಿತಿಯ ಅಧ್ಯಕ್ಷರಿಂದ ಶ್ರೀ. ಸಿ.ಜಿ.ಮಾರಿಹಾಳ ಇವರು ತಮ್ಮ ಅಭಿಪ್ರಾಯ ನೀಡಿದರು. ಈ ಬಗ್ಗೆ ವಿವರವಾಗಿ ಚರ್ಚಿಸಲಾಯಿರು. ಜ್ಯೋತಿ ವಾಹನದ ತಯಾರಿಕೆ ಬಗ್ಗೆ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ಇವರ ಪ್ರತಿನಿಧಿಯಾಗಿ ಬಂದಿದ್ದ ಶ್ರೀ. ಎ.ಎಫ್.ಕೆಳಗೇರಿ ವಿಶೇಷ ಸಹಾಯಕ, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ರೂ.65000-00 ಅಂದಾಜು ಪತ್ರ ಸಲ್ಲಿಸಿದ್ದನ್ನು ಸಭೆಯಲ್ಲಿ ಚರ್ಚಿಸಲಾಯಿತು. ಶ್ರೀ.ಎಸ್.ಎಂ.ಮರಡಿಮಠ ಇವರು ಮಾತನಾಡಿ ಜ್ಯೋತಿ ಕಾರ್ಯಕ್ರಮದಲ್ಲಿ ಉದ್ಘಾಟನೆ ದಿನಾಂಕ ಕಿತ್ತೂರಿಗೆ ಜ್ಯೋತಿ ಆಗಮಿಸುವಾಗ ಆಗುವ ವಿಳಂಬ , ಇದರಿಂದಾಗುವ ಪರಿಣಾಮಗಳ ಬಗ್ಗೆ ಸಮಿತಿಯ ಸಭೆಯಲ್ಲಿ ವಿವರಿಸಿದರು. ಅಂತಿಮ ದಿನಾಂಕದಂದು ಜ್ಯೋತಿ ಬೈಲಹೊಂಗಲ , ಅಮಟೂರು, ಸಂಗೊಳ್ಳಿ, ಕಿತ್ತೂರು ಮಾರ್ಗವಾಗಿ ಪಯಣಿಸುವ ಬದಲಿಗೆ ದಿನಾಂಕ: 22.10.2011 ರಂದು ದಾವಣಗೇರಿ – ಅಮಟೂರು-ಸಂಗೊಳ್ಳಿ-ಬೈಲಹೊಂಗಲಕ್ಕೆ ಮರಳಿ ಉತ್ಸವದ ಉಧ್ಘಾಟನೆ ದಿನಾಂಕ ನೇರವಾಗಿ

ಬೈಲಹೊಂಗಲದಿಂದ ಕಿತ್ತೂರಿಗೆ ಆಗಮಿಸುವ ಅಗತ್ಯದ ಬಗ್ಗೆ ಸಭೆಗೆ ಮನವರಿಕೆ ಮಾಡಿದರು. ಈ ಬಗ್ಗೆ ಮೇಲಿನ ಎಲ್ಲ ವಿಷಯಗಳ ಬಗ್ಗೆ ಸಮಿತಿಯ ಸಭೆಗೆ ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ , ಬೆಳಗಾವಿ ಇವರು ವಿವರವಾಗಿ ವಿವರಿಸಿದರು. ನಂತರ ಈ ಕೆಳಕಂಡ ತೀರ್ಮಾನವನ್ನು ಸರ್ವ ಸಮ್ಮತಿಯೊಂದಿಗೆ ಮಾಡಲಾಯಿತು.

1. ತಹಸೀಲ್ದಾರ, ಬೈಲಹೊಂಗಲ ಇವರು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೈಲಹೊಂಗಲ ಇವರ ನೆರವಿನಿಂದ ರಾಣಿ ಚನ್ನಮ್ಮಾ ವೀರ ಜ್ಯೋತಿಯನ್ನು ಅಳವಡಿಸಲು ಕಳೆದ ಸಾಲಿನಂತೆ ವಿಶೇಷ ವಾಹನವನ್ನು ಅಧಿಗ್ರಹಿಸಿಕೊಂಡು ದಿನಾಂಕ: 07.10.2011 ರ ಮುಂಜಾನೆ 10.00 ಗಂಟೆಗೆ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ವಶಕ್ಕೆ ನೀಡುವುದು. ಈ ಬಗ್ಗೆ ದರವನ್ನು ಕಳೆದ ಸಾಲಿನಂತೆ ಸಂಧಾನವನ್ನು ಮಾಡಿ ಅಧಿಗ್ರಹಿಸುವುದು. ಈ ಬಗ್ಗೆ ದರಪಟ್ಟಿಯನ್ನು ದಿನಾಂಕ: 29.09.2011 ರಂದು ಸಲ್ಲಿಸುವುದು.

2. ಅದೇ ರೀತಿ ವೀರ ಜ್ಯೋತಿ ವಿಶೇಷ ವಾಹನದ ಜೊತೆಗೆ ಬೆಂಗಾವಲು ವಾಹನವನ್ನು ಒದಗಿಸಲು ಇಲಾಖಾ ವಾಹನವನ್ನು ಅಧಿಗ್ರಹಿಸುವುದು. ಸದರಿ ವಾಹನದ ಜೊತೆಗೆ ಕಂದಾಯ ಇಲಾಖೆಯ ಸಿಬ್ಬಂದಿಯನ್ನು (ಶ್ರೀ.ದಸ್ತಗೀರ ಬಡೇಖಾನ, ಗ್ರಾಮ ಸಹಾಯಕ, ಹುಕ್ಕೇರಿ) ನಿಯೋಜಿಸುವುದು. ಹಾಗೂ ಅದೇ ರೀತಿ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ಇವರು ಶ್ರೀ.ಎಸ್.ಡಿ.ಶೆಗಣಿ ಹಾಗೂ ಶ್ರೀ. ಎಸ್.ಜಿ.ಖುದ್ದನ್ನವರ, ಐ.ಇ.ಆರ್.ಟಿ, ಬಿ.ಆರ್.ಸಿ, ಬೈಲಹೊಂಗಲ ಇವರನ್ನು ನಿಯೋಜಿಸುವುದು. ಈ ಬೆಂಗಾವಲು ವಾಹನಕ್ಕೆ ಅಗತ್ಯವಾದ ಇಂಧನ ಏರ್ಪಾಡು ಮಾಡುವುದು.

3. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ಇವರು ವೀರಜ್ಯೋತಿ ವಾಹನ ತಯಾರಿಕೆಗೆ ರೂ.65000.00 ಅಂದಾಜು ಪತ್ರ ಸಲ್ಲಿಸಿದ್ದನ್ನು ಚರ್ಚಿಸಲಾಯಿತು. ಕಳೆದ ಸಾಲಿನಲ್ಲಿ ರೂ. 41,500-00 ಅಂದಾಜು ಪಟ್ಟಿ ಸಲ್ಲಿಸಿದ್ದು ವಾಸ್ತವವಾಗಿ ರೂ. 47,000-00 ವೆಚ್ಚದಲ್ಲಿ ತಯಾರಿಕೆ ಮಾಡಿಸಿದ್ದನ್ನು ಪ್ರಸ್ತಾಪಿಸಿ ಜಿಲ್ಲಾಧಿಕಾರಿಗಳ ಅನುಮೋದನೆ ನಿರೀಕ್ಷೆ ಮೇಲೆ ರೂ.45,000-00 ಅಂದಾಜು ವೆಚ್ಚಕ್ಕೆ ವಿಶೇಷ ವಾಹನವನ್ನು ಕಳೆದ ಸಾಲಿಗಿಂತಲೂ ಆಕರ್ಷಕವಾಗಿ ಸಿದ್ಧಪಡಿಸಲು ಅನುಮೋದನೆ ನೀಡಲಾಯಿತು. ದಿನಾಂಕ: 7.10.2011 ರಂದು ಬೆಳಿಗ್ಗೆ 10.00 ಗಂಟೆಗೆ ವಿಶೇಷ ವಾಹನವನ್ನು ತಹಸೀಲ್ದಾರ, ಬೈಲಹೊಂಗಲ ಇವರು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ವಶಕ್ಕೆ ನೀಡುವವರಿದ್ದು ವಿಶೇಷ ವಾಹನವನ್ನು ಸಿದ್ಧಪಡಿಸಿ ದಿನಾಂಕ: 09.10.2011 ರ ಸಂಜೆ 6.00 ಕ್ಕೆ ತಹಸೀಲ್ದಾರ, ಬೈಲಹೊಂಗಲ ಇವರ ವಶಕ್ಕೆ ಉ.ನಿ ಸಾ.ಶಿ.ಇ ಇವರ ನೀಡಬೇಕೆಂದು ಸಮಿತಿ ನಿರ್ಣಯಿಸಿತು.

4. ದಿನಾಂಕ: 23.10.2011ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೈಲಹೊಂಗಲ ಹಾಗೂ ತಹಸೀಲ್ದಾರ ಬೈಲಹೊಂಗಲ ಇವರು ಉಪ ವಿಭಾಗಾಧಿಕಾರಿ, ಬೈಲಹೊಂಗಲ ಇವರ ಮಾರ್ಗದರ್ಶನದಲ್ಲಿ ವೀರ ಜ್ಯೋತಿ ಬೀಳ್ಕೊಡುಗೆ ಕಾರ್ಯಕ್ರಮವನ್ನು ರೂಪಿಸಲು ಸೂಚಿಸಲಾಯಿತು.

5. ವಾಹನ ಚಲಿಸುವ ಮಾರ್ಗದ ವೇಳಾಪಟ್ಟಿ ಕಾರ್ಯಕ್ರಮ ರೂಪಿಸಲಾಯಿತು. ದಿನಾಂಕ; 10.10.2011 ರಿಂದ ದಿನಾಂಕ: 14.10.2011ರ ವರೆಗೆ ಬೆಳಗಾವಿ ಜಿಲ್ಲೆಯಲ್ಲಿ ವಿವಿಧ ತಾಲೂಕಿನಲ್ಲಿ ಸಂಚರಿಸಿ ದಿನಾಂಕ: 15.10.2011 ರಿಂದ ಧಾರವಾಡ, ಹಾವೇರಿ, ದಾವಣಗೇರಿ, ಚಿತ್ರದುರ್ಗ, ತುಮಕೂರು ಮಾರ್ಗವಾಗಿ ದಿನಾಂಕ: 20.10.2011 ರಂದು ಬೆಂಗಳೂರು ತೆರಳಿ ದಿನಾಂಕ: 21.10.2011 ರಂದು ಬೆಂಗಳೂರಿನಿಂದ ದಾವಣಗೇರಿಗೆ ವಾಪಸು ಬರಲು ದಿನಾಂಕ: 22.10.2011 ರಂದು ದಾವಣಗೇರಿಯಿಂದ ಆಮಟೂರು, ಸಂಗೂಳ್ಳಿ ಮಾರ್ಗವಾಗಿ ಬೈಲಹೊಂಗಲ ವಾಸ್ತವ್ಯ ಮಾಡಿ ದಿನಾಂಕ: 23.10.2011 ರಂದು ಬೈಲಹೊಂಗಲದಿಂದ ನೇರವಾಗಿ ಕಿತ್ತೂರು ಉಧ್ಘಾಟನಾ ಸಮಾರಂಭಕ್ಕೆ ಆಗಮಿಸುವಂತೆ ಕಾರ್ಯಕ್ರಮ ರೂಪಿಸಲಾಯಿತು.

6. ಶ್ರೀ.ಚನ್ನಪ್ಪ. ಮಾರಿಹಾಳ, ಅಧ್ಯಕ್ಷರು, ರಾಣಿ ಚನ್ನಮ್ಮಾ ವಿಜಯೋತ್ಸವ ಸಮಿತಿ ಇವರು ಜ್ಯೋತಿ ನಿರ್ವಹಿಸಲು ಕ್ಷೇತ್ರದ ಹಾಗೂ ಸ್ವಯಂ ಕಾರ್ಯಕರ್ತರ ಖರ್ಚಿನ ಬಗ್ಗೆ ರೂ. 31275-00 ಅನುದಾನ ಬೇಡಿಕೆ ಸಲ್ಲಿಸಿದರು. ಈ ಬಗ್ಗೆ ಲಿಖಿತವಾಗಿ ಮನವಿ ದಿನಾಂಕ: 29.09.2011 ರೊಳಗೆ ನೀಡಲು ತೀರ್ಮಾನಿಸಲಾಯಿತು.

7. ಕಾರ್ಯಕ್ರಮದ ಸಂಬಂಧಪಟ್ಟಂತೆ ಹೊರ ಜಿಲ್ಲೆಯ ತಹಸೀಲ್ದಾರ ರವರುಗಳಿಗೆ ವಿಶೇಷ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಂದ ಅಗತ್ಯ ಸಹಕಾರ ಕೋರಿ ಅ.ಸ.ಪತ್ರ ಬರೆಯಬೇಕೆಂದು ತಹಸೀಲ್ದಾರ, ಬೈಲಹೊಂಗಲ್ ಇವರು ಕೋರಿದ ಪ್ರಸ್ತಾವನೆ ಅನುಮೋದಿಸಲಾಯಿತು.

ಮಾರ್ಗದ ಕಾರ್ಯಕ್ರಮ ವೇಳಾಪಟ್ಟಿಯಂತೆ ವಿಜಯೋತ್ಸವ ವಾಹನ ಆಗಮಿಸಿದ ಬಗ್ಗೆ ರೂಪಿಸಿದ ಕಾರ್ಯಕ್ರಮದ ವಿವರ ಹಾಗೂ ನಿರ್ಗಮನದ ಬಗ್ಗೆ ಸಂಬಂಧಪಟ್ಟ ತಹಸೀಲ್ದಾರರೊಂದಿಗೆ ಸಂಪರ್ಕ ಇಟ್ಟುಕೊಂಡು ಪ್ರತಿದಿನ ಜಿಲ್ಲಾಧಿಕಾರಿಗಳಿಗೆ ನಿಸ್ತಂತು ಸಂದೇಶ/ಫಾಕ್ಸ ಸಂದೇಶ ನೀಡಲು ತಹಸೀಲ್ದಾರ, ಬೈಲಹೊಂಗಲ ಇವರನ್ನು ಸಂಪರ್ಕ ಅಧಿಕಾರಿಯಾಗಿ ಸಮಿತಿ ನೇಮಿಸಿತು.

ಯಾವುದೇ ವಿಷಯವಿಲ್ಲದ್ದರಿಂದ ವಂದನೆಗಳೊಂದಿಗೆ ಸಮಿತಿ ಸಭೆ ಮುಕ್ತಾಯಗೊಳಿಸಲಾಯಿತು

**(ಕೆ.ಹೇಮಾಜಿ ನಾಯಕ್)**
ವಿಶೇಷ ಜಿಲ್ಲಾಧಿಕಾರಿಗಳು,
ಭೂಸ್ವಾ, ಪುನರ್ವಸತಿ ಮತ್ತು ಪುನರ್ ನಿರ್ಮಾಣ,
ಬೃಹತ್ ನೀರಾವರಿ ಯೋಜನೆಗಳು, ಬೆಳಗಾವಿ.